ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

9

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕೃಷಿ ಇಲಾಖೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 7/4/21

# 30 ಲಕ್ಷ ರೈತರಿಗೆ ಸಾಲಭಾಗ್ಯ

## ಕೃಷಿಕರಿಗೆ ಆರ್ಥಿಕ ಸಂಕಷ್ಟ ತಟ್ಟದಂತೆ ಕ್ರಮ

• ಎಸ್. ಲಕ್ಷ್ಮಿನಾರಾಯಣ

ಬೆಂಗಳೂರು: ರೈತಾಪಿ ಸಮುದಾಯಕ್ಕೆ ಕೊರೊನಾ ಆರ್ಥಿಕ ಸಂಕಷ್ಟ ತಟ್ಟದಂತೆ ನೋಡಿಕೊಳ್ಳಲು ರಾಜ್ಯ ಸರ್ಕಾರ ಮುಂದಾಗಿದ್ದು ಪ್ರಸಕ್ತ ವರ್ಷ 30 ಲಕ್ಷ ರೈತರಿಗೆ 20 ಸಾವಿರ ಕೋಟಿ ರೂ. ಬೆಳೆ ಸಾಲ ವಿತರಿಸಲು ಸಜ್ಜಾಗಿದೆ.



ಕೃಷಿ ಸಾಲಕ್ಕಾಗಿ ನಬಾರ್ಡ್‌ನಿಂದ ದೊರೆಯುವ ಮರು ಹಣಕಾಸು ನೆರವು ಪ್ರಮಾಣ ಈಗಿರುವ ಶೇ.35ರಿಂದ ಶೇ.50ಕ್ಕೆ ಹೆಚ್ಚಿಸುವಂತೆ ಕೇಂದ್ರ ಸರ್ಕಾರದ ಮೊರೆ ಹೋಗಲು ರಾಜ್ಯ ತೀರ್ಮಾನಿಸಿದೆ.

ಕೊರೊನಾ ಆರ್ಥಿಕ ಸಂಕಷ್ಟ ಹಿನ್ನೆಲೆಯಲ್ಲಿ ರೈತರಲ್ಲಿ ಬೆಳೆ ಸಾಲ ವಿಷಯದಲ್ಲಿ ಆತಂಕ ಮೂಡದಂತೆ ನೋಡಿಕೊಳ್ಳಲು ಡಿಸಿಸಿ ಬ್ಯಾಂಕ್‌ಗಳ ಅಧ್ಯಕ್ಷರುಗಳ ಸಭೆಯಲ್ಲೂ ನಿರ್ಧರಿಸಲಾಗಿದೆ ಎಂದು ಹೇಳಲಾಗಿದೆ.

ಹಿಂದಿನ ವರ್ಷಗಳ ಮಾಸಿಕವಾರು ಬೆಳೆ ಸಾಲ ಬೇಡಿಕೆಯ ಮಾಹಿತಿ ಆಧಾರದ ಮೇಲೆ ಯಾವ್ಯಾವ ತಿಂಗಳಿಗೆ ಎಷ್ಟೆಷ್ಟು ಸಾಲದ ಅವಶ್ಯಕತೆ

**ಬೆಳೆ ಸಾಲ ವಿತರಣೆಗೆ ತೊಂದರೆ ಇಲ್ಲದಂತೆ ನೋಡಿಕೊಳ್ಳಲಾಗುವುದು. ಈ ವರ್ಷ 20 ಸಾವಿರ ಕೋಟಿ ರೂ.ವರೆಗೂ ಸಾಲ ವಿತರಿಸುವ ಗುರಿ ಹೊಂದಿದ್ದೇವೆ.**



**• ಎಸ್.ಟಿ.ಸೋಮಶೇಖರ್, ಸಹಕಾರ ಸಚಿವ**

ಬೀಳಬಹುದು ಎಂಬ ಲೆಕ್ಕಾಚಾರ ಮಾಡಿ ಪಟ್ಟಿ ಸಿದ್ಧಪಡಿಸಲಾಗಿದೆ. ಡಿಸಿಸಿ ಬ್ಯಾಂಕ್, ಅಪೆಕ್ಸ್ ಬ್ಯಾಂಕ್‌ನಿಂದ ಸಾಲ ಮನ್ನಾ ಕುರಿತು ಬರುವ ಕ್ಲೈಮ್‌ಗಳಿಗೆ ತಕ್ಷಣ ಹಣಕಾಸು ಬಿಡುಗಡೆಗೂ ಆರ್ಥಿಕ ಇಲಾಖೆಗೆ ನಿರ್ದೇಶನ ನೀಡಲು ಸಿಎಂಗೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಗಿದೆ ಎಂದು ಹೇಳಲಾಗಿದೆ.

▶ 7ನೇ ಪುಟಕ್ಕೆ

# 30 ಲಕ್ಷ ರೈತರಿಗೆ ಸಾಲಭಾಗ್ಯ

**1ನೇ ಪುಟದಿಂದ ▶ 3 ಲಕ್ಷ ಹೊಸ ರೈತರಿಗೆ ಸಾಲ:** ಈ ಮಧ್ಯೆ, ಬೆಳೆ
ಸಾಲ ವಿತರಣೆಯಲ್ಲಿ ಸಹಕಾರ ಇಲಾಖೆಯು 2020-21 ನೇ ಸಾಲಿನಲ್ಲಿ
ನಿಗದಿತ ಗುರಿಗಿಂತ 1.31 ಲಕ್ಷ ರೈತರಿಗೆ 1,960 ಕೋಟಿ ರೂ.ಸಾಲ
ವಿತರಿಸಿದೆ. 24.36 ಲಕ್ಷ ರೈತರಿಗೆ 15,300 ಕೋಟಿ ರೂ. ಸಾಲ ನೀಡುವ
ಗುರಿ ಇತ್ತಾದರೂ 25.67 ಲಕ್ಷ ರೈತರಿಗೆ 17,260 ಕೋಟಿ ರೂ. ಸಾಲ
ನೀಡಿದೆ. 2021-22 ಸಾಲಿನಲ್ಲಿ 30 ಲಕ್ಷ ರೈತರಿಗೆ 20 ಸಾವಿರ ಕೋಟಿ ರೂ.
ಸಾಲ ನೀಡುವ ಗುರಿ ಹಾಕಿಕೊಂಡಿದ್ದು, ನವೀಕರಣ ಜತೆಗೆ ಹೊಸದಾಗಿ 3
ಲಕ್ಷ ಹೆಚ್ಚುವರಿ ರೈತರಿಗೂ ಸಾಲ ನೀಡುವ ಉದ್ದೇಶವಿದೆ ಎಂದು ಇಲಾಖೆ
ಮೂಲಗಳು ತಿಳಿಸಿವೆ. ಈ ಹಿಂದೆ ಘೋಷಿಸಲಾಗಿದ್ದ ಬೆಳೆ ಸಾಲ
ಮನ್ನಾದಡಿ ತಾಂತ್ರಿಕ ಕಾರಣಗಳಿಗಾಗಿ ತಡೆಹಿಡಿದಿದ್ದ ಸುಮಾರು 1 ಲಕ್ಷ
ರೈತರ ಸಾಲ ಮನ್ನಾ ಚುಕ್ತಾ ಸಹ ಮಾಡಲಾಗಿದೆ.

ಕೃಷಿ ಸಾಲಕ್ಕೆ ನಬಾರ್ಡ್‌ನಿಂದ ನೀಡುವ ಮರು ಹೊಂದಾಣಿಕೆ ಸಾಲದ
ಪ್ರಮಾಣವನ್ನು ಶೇ.50 ರವರೆಗೂ ಹೆಚ್ಚಿಸಲು ಕೇಂದ್ರ ಕೃಷಿ ಇಲಾಖೆಗೆ
ಪ್ರಸ್ತಾವನೆ ಸಲ್ಲಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಸಹಕಾರ ಸಂಘಗಳ
ಮೂಲಕ ಶೂನ್ಯ ಬಡ್ಡಿ ದರದಲ್ಲಿ 3 ಲಕ್ಷ ರೂ.ವರೆಗೆ ಬೆಳೆ ಸಾಲ, ಶೇ.3ರ
ಬಡ್ಡಿ ದರದಲ್ಲಿ 10 ಲಕ್ಷ ರೂ.ವರೆಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ
ಸಾಲ ನೀಡಲಾಗುತ್ತಿದೆ. ಕಳೆದ ವರ್ಷ ಗ್ರಾಮೀಣ ಭಾಗದಲ್ಲಿ ಸಹಕಾರ
ಇಲಾಖೆ ದೊರಕಿಸಿಕೊಟ್ಟ ಬೆಳೆಸಾಲದಿಂದ ರೈತರು ಆರ್ಥಿಕ ಸಂಕಷ್ಟದಿಂದ
ಪಾರಾಗಿದ್ದರು.

**ದುಪ್ಪಟ್ಟು ಬೆಳೆ ಸಾಲ ವಿತರಣೆ:** ಆರ್ಥಿಕ ಸಂಕಷ್ಟದ ನಡುವೆಯೂ ಪ್ರಸಕ್ತ
ವರ್ಷ ಬೆಳೆ ಸಾಲ ವಿತರಣೆಗೆ ಯಾವುದೇ ತೊಂದರೆ ಇಲ್ಲದಂತೆ
ನೋಡಿಕೊಳ್ಳಲಾಗುವುದು. ಡಿಸಿಸಿ ಬ್ಯಾಂಕ್ ಹಾಗೂ ಅಪೆಕ್ಸ್ ಬ್ಯಾಂಕ್ ಜತೆ
ನಿತ್ಯ ಸಮನ್ವಯ ಸಾಧಿಸಿದ್ದರಿಂದ ಕಳೆದ ವರ್ಷ ನಿಗದಿತ ಗುರಿಗಿಂತ ಹೆಚ್ಚಿನ
ಸಾಧನೆ ಮಾಡಲಾಗಿದ್ದು ಈ ವರ್ಷ ಆ ಪ್ರಮಾಣ ದುಪ್ಪಟ್ಟು ಮಾಡಲಾಗು
ವುದು. 20 ಸಾವಿರ ಕೋಟಿ ರೂ.ವರೆಗೂ ಸಾಲ ವಿತರಿಸುವ ಗುರಿ ಹೊಂದ
ಲಾಗಿದೆ. ಪ್ರಧಾನಿ ನರೇಂದ್ರ ಮೋದಿಯವರು ಘೋಷಿಸಿದ ಆತ್ಮನಿರ್ಭರ
ಯೋಜನೆ ಅನುಷ್ಠಾನದಲ್ಲೂ ಕರ್ನಾಟಕ ದೇಶದಲ್ಲೇ ಮುಂದಿದೆ ಎಂದು
ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದ್ದಾರೆ.